INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-8, Issue -04,July-August, 2026
Page No,126-135
Peer -Reviewed, Refereed Journal

# ‘ಧಾರ್ಮಿಕ ಸುಧಾರಣೆ ಮತ್ತು ಶೈಕ್ಷಣಿಕ ಸೇವೆಯಲ್ಲಿ ಸಿದ್ಧಗಂಗಾ ಮಠದ ಪಾತ್ರ’

ಡಾ.ಪಾರ್ವತಮ್ಮ.ಎಂ.[1]

**ಪೀಠಿಕೆ**

ಭಾರತೀಯ ಜೀವನ ಕ್ರಮವು ಒಂದು ಉದಾತ್ತಧ್ಯೇಯೋದ್ದೇಶದಿಂದ ಕೂಡಿದುದಾಗಿ ಅಧ್ಯಾತ್ಮ-ಸಾಧನೆಗಾಗಿ ಧರ್ಮದ ಚೌಕಟ್ಟಿನಲ್ಲಿ ಸಮಾಜ ರಚನೆಯಾಗಿತ್ತು. ಧರ್ಮ ಸಮ್ಮತವಾದ ಕಾರ್ಯ ಸರ್ವೆ ಸಾಮಾನ್ಯವಾಗಿತ್ತು. ಈ ದೃಷ್ಠಿಯಿಂದ ಸಮಾಜದ ಎಲ್ಲಾ ಆಯಾಮಗಳು ಧರ್ಮದಿಂದ ನಿಯಂತ್ರಣವಾಗಿದ್ದವು ವ್ಯಕ್ತಿಯ ಜೀವನ ಪದ್ಧತಿಯೇ ಧರ್ಮದ ತಳಹದಿಯಲ್ಲಿ ರೂಪಿತವಾಗಿತ್ತು ಧರ್ಮ ಜೀವನದ ಅವಿಭಾಜಿತ ಅಂಗವಾಗಿ ಪರಿಣಮಿಸಿತ್ತು. ಪ್ರತಿಯೊಬ್ಬ ವ್ಯಕ್ತಿಯು ಬದುಕಿನ ಹೋರಾಟ ಸುಖ ಮತ್ತು ಶಾಂತ ಜಿವನದ ಕಡೆಗೆ ನಡೆದಿದೆ ಸುಖ ಶಾಂತ ಜೀವನದ ಸಾಧಕಗಳೇ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ ಕೂಡ ಚತುರ್ವಿದ, ಪುರುಷಾರ್ಥಗಳು ಸಮೃದ್ಧ ಜೀವನಕ್ಕೆ ಅರ್ಥ, ಕಾಮಗಳು ಪ್ರಮುಖ ಸ್ಥಾನವನ್ನು ಪಡೆದಿದೆಯಾದರು ಧರ್ಮ ಸಮ್ಮತವಾದಾಗ ಪರಮ ಪುರುಷಾರ್ಥವಾದ ಮೋಕ್ಷ ಸಾಧನೆಯ ಸುಗಮ ದಾರಿಯಾಗುತ್ತದೆ. ಮೋಕ್ಷ ಪಡೆದು ಪರಮ ಶಾಂತಿಯನ್ನು ಹೊಂದುತ್ತಾನೆ. ಈ ದೃಷ್ಠಿಯಿಂದ ವ್ಯಕ್ತಿಯೂ ಜೀವನದಲ್ಲಿ ಧರ್ಮದ ಪಾತ್ರ ಅತ್ಯಂತ ಪ್ರಮುಖಪಾತ್ರವಾದಿದೆಂದು ಬಲ್ಲವರ ಅಭಿಪ್ರಾಯ ಈ ಕಾರಣದಿಂದಲೇ ಧರ್ಮ ಎಲ್ಲದರ ಮೂಲಕ ಸತ್ವವಾಗಿ ಎಲ್ಲಾ ಕಾರ್ಯ ರಂಗಗಳಲ್ಲಿ ಪ್ರಭಾವಿತ ಅಂಶವಾಯಿತು ಝಿವನಾಧಾರ ವಸ್ತುವಾಗಿ ಪರಿಣಮಿಸಿತು.

ಜೀವನದಲ್ಲಿ ಅತಿಮುಖ್ಯವಾದ ಧರ್ಮ ಬೋಧನೆ ಧರ್ಮದ ರೂಪರೇಷೆಗಳು ಧರ್ಮ ಸ್ವರೂಪ ಮುಂತಾದವುಗಳನ್ನು ತಿಳಿ ಹೇಳುವ ಅಗತ್ಯತೆ ಕಂಡು ಬಂದಿತು ಬೋಧನೆ ಮತ್ತು ಪ್ರಚಾರ ದೃಷ್ಠಿಯಿಂದ ಧರ್ಮ ಸಂಸ್ಥೆಗಳ ಮಠ, ಮಾನ್ಯಗಳ ಹುಟ್ಟಿಗೆ ಕಾರಣವಾಯಿತು. ಅನೇಕ ಮಠಗಳು ನಾಡಿನೆಲ್ಲೆಡೆ ಸ್ಥಾಪನೆಗೊಂಡವು ಮಠಗಳು ಧರ್ಮ ಭೋದನೆಯ ಕೇಂದ್ರಗಳಾದವು ಅಲ್ಲಿನ ಗುರುಗಳು ಸ್ವಾಮಿಗಳು ಶಿವಯೋಗಿಗಳು ತಮ್ಮ ಪೂಜೆ, ತಪಸ್ಸು, ಅನುಷ್ಠಾನಗಳಿಂದ ಆ ನೆಲೆ, ಜಲವನ್ನು ಪವಿತ್ರಗೊಳಿಸಿದರು ಅವರು ನಿಂತ ನೆಲವೇ ಧರ್ಮ ಕ್ಷೇತ್ರವಾಯಿತು. ಅನುಷ್ಠಾನ ಗೈದ ಸ್ಥಳವೇ ಧ್ಯಾನ ಕೇಂದ್ರವಾಯಿತು.

---

1. **ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಗಿರಿ.**

ಅವರು ಕೈಗೊಂಡ ಸಮಾಜೋದ್ಧಾರ ಕಾರ್ಯಗಳು ಧರ್ಮಕಾರ್ಯಗಳಾದವು ತಮ್ಮ ತಪೋನುಷ್ಠಾನ ಪೂಜಾ ಫಲಗಳೇ ಧರ್ಮದ ಅಮೃತ ಫಲವಾಗಿ ಸಮಾಜದ ಪರಿವರ್ತನೆಗೆ ಸಹಕಾರಿಯಾದವು ಸಮಾಜದ ಎಲ್ಲಾ ವಿಧವಾದ ಅನಿಷ್ಠಗಳ ನಿವಾರಣೆಗೆ ಸಹಾಯಕವಾದವು. ಇದರಿಂದ ಸಮಾಜದ ಎಲ್ಲಾ ವರ್ಗದ ಜನಗಳಿಗೆ ಆಪದ್ಬಾಂಧವರಾಗಿ ಮಠದ ಗುರುಗಳು ಕಂಡು ಬಂದರು ದೀನ ದಲಿತರು ದುಖ:ಗಳು ಶೋಷಿತರು ಆಕರ್ಷಿತರಾದರು ತಮ್ಮ ದಿನ ನಿತ್ಯದ ದುಖ: ದುಮ್ಮಾನಗಳನ್ನು, ಕಷ್ಠ–ನಷ್ಠಗಳನ್ನು ಮುಕ್ತ ಮನಸ್ಸಿನಿಂದ ಗುರುಗಳ ಮುಂದೆ ನಿವೇದಿಸಿಕೊಂಡರು ಪರಿಹಾರಕವಾದ ಸಾಂತ್ರವಾನದ ಹಿತನುಡಿಗಳನ್ನು ಸಲಹೆ ಸಹಾಯವನ್ನು ಧರ್ಮ ಸಮ್ಮತವಾದ ರೀತಿಯಲ್ಲಿ ನೊಂದವರಿಗೆ ಗುರುಗಳು ನೀಡುತ್ತಾ ಬಂದರು ಜನರ ನೋವೇ, ತನ್ನ ನೊವೆಂದು ತಿಳಿದು ಲೋಕದ ಕಣ್ಣಿರನ್ನು ಹೊರೆಸಲು ತಮ್ಮ ಲಿಂಗ ತಪಸ್ಸನ್ನು ಧಾರೆಯರೆದು ಬರುವ ಭಕ್ತರನ್ನು ಉದ್ಧಾರ ಮಾಡಿದ ಶ್ರೀ ಸಿದ್ಧಗಂಗಾ ಮಠದ ಗುರು ಪರಂಪರೆ ವಿಶ್ವಮಾನ್ಯವಾದುದು ಜಗದ್ವಂದ್ವವಾದುದು ಈ ಗುರು ಪರಂಪರೆ ಜನರ ಈ ಭಾದೆಗಳನ್ನು ಪರಿಹರಿಸುತ್ತಿದ್ದರು. ತಾಪತ್ರಯಗಳನ್ನು ನಿವಾರಿಸಿ ಪಾಪ ತಾಪಗಳನ್ನು ಹೋಗಲಾಡಿಸಿತು. ಅನ್ಯ ಕ್ಷೇತ್ರೇ ಕೃತಂ ಪಾಪಂ ಪುಣ್ಯ ಕ್ಷೇತ್ರೇ ವಿನಷ್ಯತಿ ಎನ್ನುವಂತೆ ಧರ್ಶನ ಸ್ಪರ್ಶನ ಭಾಗ್ಯದಿಂದ ಪಾಪ ಭೀತಿಯನ್ನು ದೂರ ಮಾಡಿ ಭಕ್ತಿಭಾವದಿಂದ ಬದುಕುವ ಧರ್ಮದ ಬೆಳಕನ್ನು ನೀಡುತ್ತಾ ಬಂದಿದೆ.

- **ಅಧ್ಯಯನದ ಉದ್ದೇಶಗಳು**

ಪ್ರಸ್ತುತ ಸಂಶೋಧನಾ ಅಧ್ಯಯನವುವನ್ನು ಈ ಕೆಳಗಿನ ಕೆಲವು ಉದ್ದೇಶಗಳನ್ನು ಹೊಂದಿದೆ.

1. ಶ್ರೀ ಸಿದ್ದಗಂಗಾ ಮಠವು ಶೈಕ್ಷಣಿಕ ಪ್ರಗತಿಯನ್ನು ತಿಳಿಸುತ್ತದೆ.
2. ಶೈಕ್ಷಣಿಕ ಅಭಿವೃದ್ದಿಯಲ್ಲಿ ಮಠದ ಪಾತ್ರವನ್ನು ತಿಳಿಸುತ್ತದೆ.
3. ಮಠದ ವ್ಯವಸ್ಥೆ ಮತ್ತು ಮುಲಭೂತ ಸೌಕರ್ಯಗಳನ್ನು ತಿಳಿಸುತ್ತದೆ.

- **ಅಧ್ಯಯನದ ಪ್ರಾಕ್‌ಕಲ್ಪನೆಗಳು:–**

ಪ್ರಸ್ತುತ ಅಧ್ಯಯನವು ಕೆಲವು ಪ್ರಾಕ್ ಕಲ್ಪನೆಯನ್ನು ಹೊಂದಿದ್ದು ಪ್ರತಿಯೊಂದು ಅಧ್ಯಯನ ಮಾಡುವಾಗ ಆವಿಷಯದ ಬಗ್ಗೆ ಮೊದಲಿಗೆ ಕೆಲವು ಊಹೆಗಳನ್ನು ಹೊಂದಿರಬೇಕು. ಅಂತಹ ಪ್ರಾಕ್ ಕಲ್ಪನೆಗಳು ಈ ಕೆಳಕಂಡಂತೆ ಇವೆ.

1. ಸಾಮಾಜಿಕ ಸೇವೆ ಮೂಲಕ ಜನರಲ್ಲಿ ಅನಾಥ ಮಕ್ಕಳನ್ನು ದೀನ ದಲಿತರನ್ನು ಭಿಕ್ಷುಕರನ್ನು ಅನಾಥ ವೃದ್ದರನ್ನು ಸಂರಕ್ಷಿಸಿ ಪೋಷಿಸುವ ಕಾರ್ಯಗಳನ್ನು ಶ್ರೀ ಸಿದ್ದಗಂಗಾ ಮಠವು ಮಾಡುತ್ತಿವೆ.
2. ಅನಾಥರು ಹಾಗೂ ಎಲ್ಲಾ ವರ್ಗದವರಿಗೆ ಶಿಕ್ಷಣ ಮತ್ತುಜ್ಞಾನದ ದಾಸೋಹ ನೀಡುತ್ತಿರುವುದು ಕಂಡು ಬರುತ್ತದೆ,
3. ಶ್ರೀ ಸಿದ್ದಗಂಗಾ ಮಠವು ಜನರಿಗೆ ಶಿಕ್ಷಣ ಆರೋಗ್ಯ, ಸಂಸ್ಕೃತಿ ಕಲೆ ಹೀಗೆ ಹಲವು ಅಂಶಗಳ ಬಗ್ಗೆ ಪರಿಜ್ಞಾನ ಮೂಡಿಸಲು ಕಾರ್ಯ ಕ್ರಮಗಳನ್ನು ಸಿದ್ದಗಂಗಾ ಮಠವು ಮಾಡುತ್ತಿದೆ.
4. ಶ್ರೀ ಸಿದ್ದಗಂಗಾ ಮಠವು ಸಮಾಜದ ಸುಧಾರಣೆ ಹಾಗೂ ಪ್ರತಿಯೊಬ್ಬನ ಹೃದಯದಲ್ಲಿ ವೈಚಾರಿಕತೆಯನ್ನು ಉದ್ದೀಪಿಸುತ್ತದೆ.

➢ **ಸಂಶೋಧನಾ ತಂತ್ರಗಳು :–**

ಪ್ರಸ್ತುತ ಅದ್ಯಯನದಲ್ಲಿ ಈ ಕೆಳಗಿನ ಎರಡು ಸಂಶೋಧನಾ ತಂತ್ರಗಳನ್ನು ಬಳಸಲಾಗಿದೆ.

1. **ಪ್ರಾಥಮಿಕ ಆಕರಗಳು :–** ಪ್ರಾಥಮಿಕ ಆಕರಗಳ ಸಹಾಯದಿಂದ ಪ್ರಶ್ನಾವಳಿ ಸಂದರ್ಶನದ ಮೂಲಕ ಸಂದರ್ಶನ ಅನುಸೂಚಿಯನ್ನು ಬಳಸಿಕೊಂಡು ಶ್ರೀ ಸಿದ್ದಗಂಗಾ ಮಠದಲ್ಲಿರುವ ಎಲ್ಲಾ ಕಾರ್ಯಕರ್ತರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ ಮತ್ತು ಅವಲೋಕನ ಸಹಾಯದಿಂದಲೂ ಸಹ ಹಾಗೂ ಕ್ಯಾಮರಾ ಸಂಭಾಷಣೆ ಮೂಲಕ ಮಾಹಿತಿಯನ್ನು ವಸ್ತುನಿಷ್ಠವಾಗಿ ಸಂಗ್ರಹಿಸಲಾಗಿದೆ.
2. **ಅನುಷಂಗಿಕ ಅಥವಾ ಮಾಧ್ಯಮಿಕ ಮೂಲಗಳು:** ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂದಿಸಿದಂತೆ ಅನುಷಂಗಿಕ ಅಥವಾ ಮಾಧ್ಯಮಿಕ ಮೂಲಗಳಾಗಿರುವ ಗ್ರಂಥಗಳು ಲೇಖನಗಳು ಸಮೀಕ್ಷೆ ಗ್ರಂಥಗಳು ಯೋಜನಾ ನಿಯತ ಕಾಲಿಕೆಗಳು ಕೃತಿಗಳು ಬರಹಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.


➢ **ಅಧ್ಯಯನದ ಪ್ರಾಮುಖ್ಯತೆ**

ಸಿದ್ಧಗಂಗಾ ಮಠವು ಸಮಾಜದ ಅಭಿವೃದ್ಧಿಗೆ ಶ್ರೀಶಿವಕುಮಾರ ಸ್ವಾಮಿಜಿಗಳು ಯಾವ ರೀತಿ ಶ್ರಮಿಸಿದ್ದಾರೆ. ಮಠದ ಸ್ಥಿತಿ–ಗತಿಗಳನ್ನು ಕುರಿತು ನಡೆಸಲಾದ ಕ್ಷೇತ್ರಾಧ್ಯಯನವಾಗಿದೆ. ಮಠವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ಮಠವು ಪರಿವರ್ತನೆಗಳಾಗಿವೆ. ಯಾವ ರೀತಿ ಅಭಿವೃದ್ಧಿಯಾಗಿದೆ ಎಂಬುದನ್ನು ತಿಳಿಯಲಾಗಿದೆ. ಅಂದರೆ ಸಮಾಜ ಸುಧಾರಣೆ ಹಾಗೂ ಪ್ರತಿಯೊಬ್ಬನ ಹೃದಯದಲ್ಲಿ ವೈಚಾರಿಕತೆಯ ಕಿಡಿಯನ್ನು ಉದ್ದೀಪಿಸಲು ಜಾತಿ ಮತಗಳ ಬೇದ ಭಾವವಿಲ್ಲದೆ

ಸೌಹಾರ್ದತೆಯ ಸಮಾಜವನ್ನು ನಿರ್ಮಿಸುವುದಾಗಿದೆ. ಶ್ರೀಗಳ ಮಠವು ಜಾತಿ, ಮತಗಳ ಬೇಧ ಭಾವವಿಲ್ಲದೆ ವಿದ್ಯಾಭ್ಯಾಸವನ್ನೆ ಮುಖ್ಯಗುರಿಯಾಗಿದ್ದುಕೊಳ್ಳದೆ ಶ್ರಮ ನಿಷ್ಠೆ ಸೇವೆ ಮನೋಬಾವ ಮುಂತಾದ ರಾಷ್ಟ್ರ. ಪೋಷಕವಾಗುವ ಆದರ್ಶ ಗುಣಗಳನ್ನು ಮಕ್ಕಳಲ್ಲಿ ಬೆಳೆಸಲು ಶ್ರೀಗಳ ಮಠವು ತನ್ನ ಮಹತ್ವವನ್ನು ಗಳಿಸಿಕೊಂಡು ಬಂದಿದೆ ಒಂದು ಸಮಾಜ ಅಭಿವೃದ್ಧಿಯಾಗಬೇಕಾದರೆ ಗುರುಗಳು ಸನ್ಮಾರ್ಗದಲ್ಲಿ ನಡೆದಾಗ ಆ ಮಠವು ಉತ್ತಮವಾಗಿ ಬೆಳೆಯುತ್ತದೆ ಎಂಬುದಕ್ಕೆ ಶ್ರೀ ಶ್ರೀ ಶಿವಕುಮಾರ ಸ್ವಾಮಿಜೀಗಳು ಆದರ್ಶವಾಗಿದ್ದಾರೆ.

ಶಿವಕುಮಾರ ಸ್ವಾಮಿಗಳು ಮಠದಲ್ಲಿ ಶಿಕ್ಷಣ ಸಂಸ್ಕೃತಿ ಕಲೆ ಹೀಗೆ ಹಲವು ಅಂಶಗಳ ಬಗ್ಗೆ ಪರಿಜ್ಞಾನ ಮೂಡಿಸಲು ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಠವನ್ನು ಬೆಳೆಸುತ್ತಾ ಹೋದರು. ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗೆ ಸುಲಭವಾಗಿ ಶಿಕ್ಷಣವನ್ನು ಒದಗಿಸಲು ವಿವಿಧ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು ಶ್ರೀಗಳಿಗೆ ಪ್ರಮುಖವಾಗಿ ಶಿಕ್ಷಣವನ್ನು ಬೆಳೆಸಬೇಕೆಂಬ ಹಂಬಲ ಅವರ ಅಚಲ ನಿಲುವಾಗಿತ್ತು ಶ್ರೀಗಳ ಮಠ ವತಿಯಿಂದ ಸುಮಾರು 124 ಕಾಲೇಜುಗಳು ನಡೆಯುತ್ತವೆ. ಇವುಗಳಲ್ಲಿ ಕೆಲವು ಅನುದಾನರಹಿತ, ಸಹಿತ ಅನುದಾನವಿರಲಿ, ಇಲ್ಲದಿರಲೀ, ಶಾಲಾ ಕಾಲೇಜುಗಳಿಗೆ ಸಂಬಂಧಿಸಿದ ಕಟ್ಟಡ ಪೀಠೋಪಕರಣ ಶಾರದ ಮಂದಿರದಷ್ಟು ಸುಸಜ್ಜಿತವಾಗಿದೆ. ಈ ಶಾಲೆಯಲ್ಲಿ ವ್ಯವಸ್ಥಿತ ಬೋಧನೆಯಿಂದ ಉತ್ತಮ ಫಲಿತಾಂಶ ಪಡೆಯುತ್ತಿವೆ ಕ್ಷೇತ್ರದ ವತಿಯಿಂದ ಈ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆ ಜರುಗಿದೆ.

### ❖ ಶ್ರೀ ಸಿದ್ಧಗಂಗಾ ಕ್ಷೇತ್ರದ ಹಿನ್ನೆಲೆ




ಶ್ರೀ ಸಿದ್ಧಗಂಗಾ ಮಠವು ಸಮಾಜದಲ್ಲಿ ಸುವ್ಯವಸ್ಥೆಗೊಳಿಸುವುದು ಜನರ ಮೌಢ್ಯವನ್ನು ನಿವಾರಿಸುವುದು ದೀನ ದಲಿತರ ಆಚಾರಶುದ್ಧಿ, ವಿಚಾರ ಜಾಗೃತಿ ತತ್ವಶಾಸ್ತ್ರದಲ್ಲಿ ಆಸಕ್ತಿಯನ್ನುಂಟು ಮಾಡಿ ಮೂಲಭೂತ ಸೌಕರ್ಯಗಳಾದ ಶೈಕ್ಷಣಿಕವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಅಭಿವೃದ್ಧಿ ಪಡಿಸಲು ಮೂಲ ಸಾಕ್ಷಿಯಾಗಿದೆ. ಹಾಗೂ ಉದ್ದೇಶವಾಗಿದೆ. ಪರಮ ಪೂಜ್ಯ ಶ್ರೀಗಳವರು ಶಿಕ್ಷಣ ಕ್ಷೇತ್ರದ ಎಲ್ಲಾ ಮಜಲುಗಳನ್ನು ಬಲ್ಲವರಾಗಿದ್ದರು, ಆದ್ದರಿಂದಲೇ ಪ್ರಾಚೀನಾ ಮತ್ತು ಆಧುನಿಕ ಶಿಕ್ಷಣ ಪದ್ಧತಿಗಳನ್ನು ಪುನರುಜ್ಜಿವನಗೊಳಿಸಿದ್ದಾರೆ. ಇವೆರಡು ಪದ್ಧತಿಗಳನ್ನು ಸಮೀಕರಿಸಿದ್ದಾರೆ. ಅನಾದಿ ಕಾಲದಿಂದ ರೂಢಿಯಲ್ಲಿದ್ದ ವೈಧಿಕ ಶಿಕ್ಷಣವನ್ನು ಆಧುನಿಕ ಕಾಲದ ಲೌಕಿಕ ಶಿಕ್ಷಣವನ್ನು ಸಮಾನ

ದೃಷ್ಟಿಯಿಂದ ಪರಿಭಾವಿಸಿರುವುದು ಅನುಪಮವಾಗಿದೆ. ಈ ಎಲ್ಲಾ ದೃಷ್ಟಿಗಳಿಂದ ಸಿದ್ದಗಂಗಾ ಕ್ಷೇತ್ರದ ಶಿಕ್ಷಣ ಸಂಸ್ಥೆಗಳ ಒಂದು ವಿಹಂಗಮ ದೃಷ್ಟಿಯನ್ನು ಮಾಡಲಾಗಿದೆ. ಪೂಜ್ಯ ಡಾ.ಶ್ರೀ.ಶ್ರೀ.ಶಿವಕುಮಾರ ಸ್ವಾಮಿಜಿಯವರು ಗ್ರಾಮಿಣ ಭಾಗದ ಜನತಗೆ ಶಿಕ್ಷಣ ಸೌಲಭ್ಯ ಲಭ್ಯವಾಗಬೇಕೆಂಬುದೇ ಆಗಿತ್ತು ಆದ್ದರಿಮದಲೇ ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿ ಗಣನೀಯಾ ಕಾರ್ಯವನ್ನು ಮಾಡಿರುವುದು ಶ್ರೀಗಳವರ ದೂರದೃಷ್ಟಿ ದ್ಯೂತಕವಾಗಿದೆ. ಶ್ರೀ.ಉದ್ವಾನ ಶಿವಯೋಗಿಗಳ ಕಾಳದಲ್ಲಿ ಶಿಕ್ಷಣವನ್ನು ಒಂದು ಬೃಹತ್ ಮಟ್ಟಕ್ಕೆ ಹಾಗೂ ಸಮಾಜದಲ್ಲಿ ಪ್ರತಿಯೊಬ್ಬರು ಶಿಕ್ಷಣ ಬಲ್ಲವರಾಗಬೇಕೆಂದು ನಂಬಿ ಅವರು ಗುರುಕುಲದ ಪಾಠಶಾಲೆಗಳು ವಿಶೇಷವಾಗಿ ಅಭಿವೃದ್ಧಿಗೊಂಡಿವೆ ಕರ್ನಾಟಕದ ವಿವಿಧ ಭಾಗಗಳಲ್ಲಿ ವಿಶೇಷವಾಗಿ ತುಮಕೂರಿನಲ್ಲಿ ಸ್ಥಾಪಿಸಿರುವ ವಿದ್ಯಾ ಸಂಸ್ಥೆಗಳು ಸಂಸ್ಕೃತ ಪಾಠಶಾಲೆಗಳು, ಹದಿನೆಂಟು ಪ್ರಾಥಮಿಕ ಶಾಲೆಗಳು, ಹನ್ನೆರಡು ಪ್ರೌಡಶಾಲೆಗಳು, ನಲವತ್ತೈದು ಪದವಿ ಪೂರ್ವ ಕಾಲೇಜುಗಳು, ಒಂಭತ್ತು ಪ್ರಥಮ ದರ್ಜೆ ಕಾಲೇಜುಗಳು, ಮೂರು ಫಾರ್ಮಸಿ ಕಾಲೇಜು, ಒಂದು ತಾಂತ್ರಿಕ ಕಾಲೇಜು, ಒಂದು ತರಬೇತಿ ಕೇಂದ್ರ, ಹಾಗೂ ಶಿಕ್ಷಕರ ರತಬೇತಿ ಕೇಂದ್ರಗಳು, ಎರಡು ಕನ್ನಡ ಪಂಡಿತ ಕಾಲೇಜು, ಒಂದು ಅಂಧಮಕ್ಕಳ ಪಾಠಶಾಲೆ ಒಂದು ಪಾಲಿಟೆಕ್ನಿಕ್ ಕಾಲೇಜು, ಹಾಗೂ ಅನಾಥ ಆಶ್ರಮಗಳು, ಗೋಶಾಲೆಗಳು, ಸ್ಥಾಪನೆ ಮಾಡಿದರು. ಈ ಎಲ್ಲಾ ಅಂಶಗಳು ಸಮಾಜ ಸೇವೆ ಹಾಗೂ ಆಶ್ರಮ ಸ್ಥಾಪನೆಯ ಮೂಲ ಉದ್ದೇಶವಾಗಿದೆ.


- **ಆಶ್ರಮದ ಶುಭಾರಂಭ**

ಶ್ರೀ.ಸಿದ್ಧಗಂಗಾ ಮಠ ಕರ್ನಾಟಕದ ಒಂದು ಪುಣ್ಯಕ್ಷೇತ್ರ ಈ ಕ್ಷೇತ್ರದ ಪರಂಪರೆ ಮಹಿಮಾ ಪೂರ್ಣ, ಪರಮ ಪವಿತ್ರ 12 ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಹೋಗಿರಣದಂತೆ ಕಂಗೋಳಿಸುತ್ತಿದ್ದರು. ಶ್ರೀ.ಸಿದ್ಧಗಂಗಾ ಕ್ಷೇತ್ರವು ದಾಸೋಹದ ಮನೆ ಬಂದವರಿಗೆ ದಾಸಭಾವದಿಂದ ಶಕ್ತನುಸಾರ, ಪ್ರಸಾದ ವಿತರಿಸುವ ಜಂಗಮ ಕ್ಷೇತ್ರ, ಮಕ್ಕಳ ಮಹಾಮಂದಿರ, ಆದ್ಯಾತ್ಮ ಯೋಗದ ಅನುಭವವಮಂಟಪ ಧರ್ಮ ಸಂದೇಶ ದಿವ್ಯದಾಮ. ಜ್ಞಾನ ಪ್ರಸಾರದ ಮಹಾವಿದ್ಯಾಲಯ ಶ್ರೀ ಸಿದ್ಧಗಂಗಾ ಕ್ಷೇತ್ರ ಸಮಕಾಲೀನ ಸಮಾಜಮುಖಿ ಪ್ರಜ್ಞೆಯ ಸಮರ್ಥ ಧರ್ಮಪೀಠ ಈ ಪೀಠದ ಆಶ್ರಯದಲ್ಲಿ ಅರಳಿದ ಲಕ್ಷಾಂತರ ವಿದ್ಯಾರ್ಥಿಗಳು ಸಾತ್ವಿಕ ಜೀವನದ ಮಾರ್ಗಕಂಡು ಕೊಂಡಿದ್ದಾರೆ. ಸಿದ್ಧಗಂಗಾ ಎಂಬ ಹೆಸರೇ ಮಂತ್ರಪೂರ್ಣ ದಿವ್ಯ ತಪಸ್ಸು ಶ್ರದ್ದೆ ಮತ್ತು ನಿಷ್ಠಗಳ ಭದ್ರ ಬುನಾದಿ ಮೇಲೆ ನೆಲೆಗೊಂಡಿರುವ ಒಂದು ಪವಿತ್ರ ಕ್ಷೇತ್ರ.

ಶ್ರೀ ಸಿದ್ಧಗಂಗಾ ಕ್ಷೇತ್ರ ಬೆಂಗಳೂರು, ಪೂನಾ, ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಬೆಂಗಳೂರಿನಿಂದ ಶ್ರೀ ಕ್ಷೇತ್ರಕ್ಕೆ 66. ಕಿ.ಮೀಗಳು. ಈ ಬೆಳೆದು ನಿಂತಿರುವ ತುಮಕೂರು ನಗರ ವ್ಯಾಪ್ತಿಗೆ ಸೇರಿ ಆ ನಗರದ

ಮುಕುಟ ಮಣಿಯಂತಿದೆ. **ಶರಣರು ಮೆಟ್ಟಿದ ಧರೆ ಸಿದ್ಧಗಂಗಾ.** ಸುಮಾರು 600 ವರ್ಷಗಳ ಹಿಂದೆ ಶ್ರೀ ಸಿದ್ಧಗಂಗಾ ಮಠ ಸ್ಥಾಪನೆಯಾಯಿತು. ಸ್ಥಾಪಿಸಿದವರು ಶ್ರೀ ಗೋಸಲು ಸಿದ್ಧೇಶ್ವರರು ಇವರು ಹರದನಹಳ್ಳಿಯಲ್ಲಿ ಸ್ಥಾಪಿಸಲ್ಪಟ್ಟ ಶೂನ್ಯ ಸಿಂಹಾಸನದ ಪ್ರಭುಗಳು ಇವರು ಸಿದ್ಧಗಂಗಾ ಕ್ಷೇತ್ರವನ್ನು ತಮ್ಮ ಒಂದು ವಸಾಹತುವನ್ನಾಗಿ ಮಾಡಿಕೊಂಡು ಧರ್ಮ ಪ್ರಸಾರ ಮಾಡಿದರು ಮುಂದೆ ಇವರ ಪರಂಪರೆಯ ಶಂಕರಪ್ರಭು ಚನ್ನಬಸವೇಶ್ವರರು ಸಿದ್ಧಲಿಂಗೇಶ್ವರರ ತಪೋಭೂಮಿಯೆನಿಸಿತು. ತೋಟದ ಸಿದ್ಧಲಿಂಗೇಶ್ವರರು ಈ ಪರಂಪರೆಯಲ್ಲಿ ಅತ್ಯಂತ ಪ್ರಭಾವಶಾಲಿ ಶಿವಯೋಗಿಗಳು ಎನಿಸಿದರು. ಇವರ ಪ್ರಭಾವದಿಂದ ಕರ್ನಾಟಕದ ಉದ್ದಗಲಕ್ಕೆ ಅನೇಕ ಜಂಗಮ ಪರಂಪರೆ ಬೆಳೆದವು ಇವರು ಅಖೀಲ ಕರ್ನಾಟಕ ಕೇರಳ ತಮಿಳುನಾಡು ಮಹಾರಾಷ್ಟ್ರಗಳಲ್ಲಿ ಸಂಚಾರ ಮಾಡುತ್ತಾ ಧರ್ಮ ಜಾತಿಯನ್ನುಂಟು ಮಾಡಿದರು ಸಿದ್ಧಲಿಂಗೇಶ್ವರರ ಸಂಚಾರದ ಉದ್ದೇಶ ಅಂದಿನ ಜನತೆಯ ಮೌಢ್ಯವನ್ನು ನಿವಾರಿಸಿ ಅವರಲ್ಲಿ ಧರ್ಮ ಬುದ್ಧಿಯನ್ನು ಜಾಗೃತಗೊಳಿಸುವುದು ಕೃಷಿ ಮೊದಲ್ಗೊಂಡು ಅನೇಕ ಕಾರ್ಯಗಳಲ್ಲಿ ಜನತೆಯನ್ನು ತೊಡಗಿಸುತ್ತಾ ಸಾಮಾಜಿಕ ಸುವ್ಯವಸ್ಥೆಗೊಳಿಸುವುದು ದೀನ ದಲಿತರ ಆಚಾರ ಶುದಿ ವಿಚಾರ ಜಾಗೃತಗೊಳಿಸಿ ಸರ್ವತೋಮುಖ ಅಭಿವೃದ್ಧಿಗೆ ಹೆಣಗಿದುದು ಕಂಡು ಬರುತ್ತದೆ. ಹೀಗೆ ಸಿದ್ದಗಂಗಾ ಮಠಕ್ಕೆ ಒಂದು ಭದ್ರಬುನಾದಿ ಹಾಕಿದ್ದಾರೆ. ಇದನ್ನು ಇಂದು ವಿದೇಶಕ್ಕೆ ಸಿದ್ದಗಂಗಾ ಮಠವನ್ನು ಪರಿಚಯಿಸಿದ ಕೀರ್ತಿಯು **ನಡೆದಾಡುವ ದೇವರು** ಎಂದು ಕರೆಸಿಕೊಳ್ಳುವ ಶ್ರೀ. ಶ್ರೀ ಡಾ. ಶಿವಕುಮಾರ ಸ್ವಾಮಿಯವರಿಗೆ ಸಲ್ಲುತ್ತದೆ. ಹೀಗೆ ಸಿದ್ದಗಂಗಾ ಮಠವು ಬೆಳಕನ್ನು ಕಾಣುತ್ತಾ ಮುನ್ನುಗ್ಗುತ್ತಿದೆ.

### ❖ ಶ್ರೀ ಶಿವಕುಮಾರ ಸ್ವಾಮಿಗಳ ಜೀವನ ಚರಿತ್ರೆ



ಶ್ರೀಶಿವಕುಮಾರ ಸ್ವಾಮಿಗಳು ರಾಮನಗರ, ಜಿಲ್ಲೆ ಮಾಗಡಿ ತಾಲ್ಲೂಕು, ಸೋಲೂರು ಹೋಬಳಿ ವೀರಾಪುರ ಎಂಬ ಚಿಕ್ಕ ಗ್ರಾಮ ಶ್ರೀಗಳ ಜನ್ಮಸ್ಥಳ ಮೂಲ ಹೆಸರು ಶಿವಣ್ಣ ತಂದೆ ಹೊನ್ನೆಗೌಡರು ತಾಯಿ ಗಂಗಮ್ಮ ಈ ದಂಪತಿಗಳ ಹದಿಮೂರು ಮಕ್ಕಳಲ್ಲಿ ಕೊನೆಯವರೇ ಶಿವಣ್ಣ. ದಿನಾಂಕ–01–04–1908 ರಲ್ಲಿ ಜನ್ಮತಾಳಿದರು ಶಿವಕುಮಾರ ಸ್ವಾಮಿಜೀಗಳು ಲಕ್ಷಾಂತರ ಮಕ್ಕಗಳಿಗೆ ಪಿತೃ ಸಮಾನವಾದ ಪೂಜ್ಯವ್ಯಕ್ತಿಯಾಗುತ್ತಾನೆ. ಎಂದು ಹಸ್ತ ಸಾಮುದ್ರಿಕನೊಬ್ಬ ಶಿವಕುಮಾರ ಸ್ವಾಮಿಯ ಅಂಗೈನೋಡಿ ಭವಿಷ್ಯ ನುಡಿದಿದ್ದನು ಆತನ ಭವಿಷ್ಯಕೊನೆಗೂ ನಿಜವಾಯಿತು ಇಂದಿಗೂ ಸ್ವಾಮೀನಿಯವರ ಪೂರ್ವಶ್ರಮದ ಬಂಧುಗಳಿದ್ದಾರೆ. ಊರು ಚಿಕ್ಕದಾದರು–ಸಂಪ್ರದಾಯ ಸಂಸ್ಕಾರ ಸಹನೆ

ಪ್ರೀತಿ ವಾತ್ಸಲ್ಯಕ್ಕೆ ಬರವಿಲ್ಲ ಸರ್ಕಾರಿ ಪ್ರೈಮರಿ ಶಾಲೆ ಹೊರತಾಗಿ ಯಾವ ಆಧುನಿಕ ಸೌಕರ್ಯಗಳು ಇಲ್ಲ ಶ್ರೀಗಳು ಬೆಳೆದ ಮನೆ ಈಗ ಇಲ್ಲ ಸದರಿ ಮನೆಯ ನಿವೇಶನವನ್ನು ಸರ್ಕಾರಿ ಶಾಲೆಗೆ ದಾನ ಮಾಡಿದ್ದಾರೆ. ಹತ್ತು ಮೀಟರ್ ಅಗಲ ಮತ್ತು ಹತ್ತು ಮೀಟರ್ ಉದ್ದವಿರುವ ಶ್ರೀಗಳ ತಂದೆ–ತಾಯಿಗಳ ಸಮಾಧಿಗಳಿವೆ.

**ಶ್ರೀ ಶಿವಕುಮಾರ ಸ್ವಾಮಿಗಳವರ ದಿಟ್ಟ ಹೆಜ್ಜೆಯ ಗುರುತುಗಳು.**

- 1908 ರಲ್ಲಿ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಗಂಗಮ್ಮ ಹೊನ್ನಪ್ಪ ದಂಪತಿಗಳ 13 ನೇ ಮಗನಾಗಿ ಶ್ರೀಗಳ ಜನನ
- 1913–ವೀರಾಪುರ ಮತ್ತು ಪಾಲನಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ
- 1922–ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ
- 1926– ಮೆಟ್ರಿಕ್ಯೂಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣ
- 1927– ಉದ್ದಾನ ಶಿವಯೋಗಿಗಳ ಆಶ್ರಯದಲ್ಲಿ ನಾಲ್ಕು ತಿಂಗಳ ವಾಸ್ತವ್ಯ ಮತ್ತು ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆ
- 1927–30 ಬೆಂಗಳೂರಿನ ಶ್ರೀ ತೋಂಟದಪ್ಪ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಬೆಂಗಲೂರು ಸೆಂಟ್ರಲ್ ಕಾಲೇಜಿನಲ್ಲಿ ಪದವಿ ವಿದ್ಯಾಬ್ಯಾಸ.
- 1930– ಮಾರ್ಚ್ 3 ರಂದು ಶ್ರೀ ಸಿದ್ಧಗಂಗಾ ಕ್ಷೇತ್ರದ ಉತ್ತರಾಧಿಕಾರಿಯಾಗಿ ತನ್ನ ದಿಟ್ಟ ಹೆಜ್ಜೆಗಳನ್ನು ಹಾಕಿಕೊಂಡು ಇಂದು ಸಮಾಜದಲ್ಲಿ ಬೆಳಕನ್ನು ಚೆಲ್ಲುತ್ತಿದ್ದಾರೆ.

❖ **ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳ ಜೀವನ ಚರಿತ್ರೆ**

ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಸರ್ವರಿಗೂ ಸಿದ್ಧಿ ನೀಡುವ ಒಂದು ಪವಿತ್ರ ಕ್ರಷೇತ್ರ ಇಲ್ಲಿ ಇತಿಹಾಸ ಸಾಧಿಸಿರುವ ಲೋಕೋಪಕಾರ ಮಹಾಕಾರ್ಯಗಳು ದಾಸೋಹ ಚೈತನ್ಯ ಕ್ರಿಯಾಶೀಲಾರಾಗಿರುವ 104 ವರ್ಷ ವಯೋಮಾನದ ಡಾ. ಶ್ರೀ.ಶ್ರೀ ಶಿವಕುಮಾರ ಸ್ವಾಮಿಗಳು ಸಲ್ಲಿಸಿರುವ ಸಲ್ಲಿಸುತ್ತಿರುವ ತ್ರಿವಿದ ಸೇವೆಗಳು ಶತಮಾನದುದ್ದಕ್ಕೂ ಸಾಧಿಸಿರುವ ಆಧ್ಯಾತ್ಮಿಕ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಜನಮುಖಿ ಕಾರ್ಯಗಳು ಭಾರತ ಮತ್ತು ವಿಶ್ವದಾದ್ಯಂತ ಜನಮನ ಸೆಳೆದಿರುವ ಕ್ಷೇತ್ರದ ಹಿರಿಮೆ ಮತ್ತು ಗರಿಯನ್ನು ಸೂಚಿಸುತ್ತದೆ. ಶ್ರೀಗಳಿಗೆ ಕಾರ್ಯಭಾರದ ಒತ್ತಡ, ವೃದ್ಧಾಪ್ಯ ಭಕ್ತರ ಬಿನ್ನಹಗಳಿಗಾಗಿ ದಯಾಮಾಡಿಸುವ ಪೂಜಾ ಕಾರ್ಯಕ್ರಮಗಳು ಇತ್ತಯಾದಿ ಬಿಡುವುಕೊಡದ ಅನ್ಯ ಕಾರ್ಯಗಳ ನಿಯಮಿತ್ತ ಹಾಗೂ ಶ್ರೀ ಮಠದ ಸಂಪ್ರದಾಯದ ಪ್ರಕಾರ 31–03–1988 ರಲ್ಲಿ ಶ್ರೀ ಕ್ಷೇತ್ರದ ಜವಬ್ದಾರಿ ನಿರ್ವಹಿಸಲು ಶ್ರೀ ಮಠಕ್ಕೆ ಉತ್ತರಾಧಿಕಾರಿಯಾಗಿ ಶ್ರೀ ಸಿದ್ಧಲಿಂಗಸ್ವಾಮೀಜಿಯವರನ್ನು ನೇಮಕ

ಮಾಡಿಕೊಳ್ಳಲಾಯಿತು. ಶ್ರೀ ಸಿದ್ಧಲಿಂಗಸ್ವಾಮಿಗಳವರ ಪೂರ್ವಾಶ್ರಮದ ಹೆಸರು ವಿಶ್ವನಾಥ ಇವರ ತಾಯಿ ಶ್ರೀಮಂತ ಶಿವರುದ್ರಮ್ಮ ತಂದೆ ಶ್ರೀ ಸದಾಶಿವಯ್ಯ, ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕಂಚುಗಲ್ ಬಂಡೇಮಠ ಶ್ರೀಗಳ ಜನ್ಮಸ್ಥಳ ಜನ್ಮದಿನಾಂಕ 22–07–1963 ರಲ್ಲಿ ಎಂಟು ಜನ ಮಕ್ಕಳಲ್ಲಿ ಕೊನೆಯವರಾಗಿ ಜನ್ಮ ತಾಳಿದರು.

❖ **ಆಶ್ರಮದ ಚಟುವಟಿಕೆಗಳು**

ಶ್ರೀ ತೋಂಟದಾರ್ಯ ವಿದ್ಯಾವರ್ದಿನಿ ಸಭಾ 1938 ರಲ್ಲಿ ಸ್ಥಾಪಿತವಾದ ಈ ಸಂಘ ವಿದ್ಯಾವರ್ಥಿಗಳಿಗಾಗಿ ರೂಪಿತವಾಗಿ ಲೇಖನ ಭಾಷಣ ಕಾವ್ಯ ವಾಚಕ ವಚನ ಸ್ಪರ್ಧೆಗಳನ್ನೇರ್ಪಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಸೂಕ್ತರೀತಿಯಲ್ಲಿ ಅರಳಿಸಲು ಸಹಾಯಕವಾಗಿದೆ ಈ ಸಂಘವು ಶ್ರೀ ಪೂಜ್ಯಪಾದರ ಅಧ್ಯಕ್ಷತೆಯಲ್ಲಿ ಕ್ರೀಯಾಶೀಲವಾಗಿದೆ.

- **ಶ್ರೀ ಸಿದ್ಧಲಿಂಗೇಶ್ವರ ನಾಟಕ ಮಂಡಳಿ**
- **ಗ್ರಾಮಾಂತರ ಬಸವ ಜಯಂತಿ**
- **ಕಾಯಕ ಕಮ್ಮಟ**
- **ರಜತ–ಸುವರ್ಣಮಹೋತ್ಸವ**
- **ಶಾಖಾ ಸಂಘಗಳ ಸ್ಥಾಪನೆ**

❖ **ಮಠದ ಮತ್ತಷ್ಟು ಬೆಳವಣಿಗೆಗಳು:** ಪ್ರಸ್ತುತದಲ್ಲಿ ಹಿರಿಯ ಪ್ರಾಥಮಿಕ ಪಾಠಶಾಲೆ ಎರಡು ಪ್ರೌಢಶಾಲಾ ಶಿಕ್ಷಕ ತರಬೇತಿ ಅನಾಥ ಆಶ್ರಮ ಶಿಕ್ಷಣ ಮಹಾವಿದ್ಯಾಲಯ 8000 ವಿದ್ಯಾರ್ಥಿಗಳು ಉಚಿತವಾಗಿ ಶ್ರೀಮಠದ ಆಶ್ರಮ ವಸತಿಗಳ ಆಶ್ರಯ ಪಡೆದಿದ್ದಾರೆ. ಇಲ್ಲಿ **ದಶಕ ದಶಕಗಳಿಂದ ಉರಿಯುತ್ತಿರುವ ಅಡುಗೆ ಒಲೆ ಆರಿಲ್ಲ, ಬೆಳಗುತ್ತಿರುವ ಜ್ಞಾನ ಜ್ಯೋತಿ ನಂದಿಲ್ಲ, ದುಡಿಯುವ ಕೈಗಳು ಕೆಲಸ ನಿಲ್ಲಿಸಿಲ್ಲ.** ಹೀಗೆ ಸಕ್ರಿಯವಾಗಿ ಬೆಳವಣಿಗೆಯತ್ತ ಶ್ರೀಗಳ ಮಠವು ಸಾಗುತ್ತ ಬಂದಿದೆ.

❖ **ದಾಸೋಹ:** ಸಿದ್ದಗಂಗೆ ಶ್ರೀಗಳು ದಾಸೋಹವು ಜಾತ್ಯತೀತವಾದುದು ಇಡೀ ಕರ್ನಾಟಕ, ಇಡೀ ಭಾರತದಲ್ಲಿ ಜಾತ್ಯತೀತವಾಗಿ ದಾಸೋಹವನ್ನು ಪ್ರಾರಂಭಿಸಿದವರು ಸಿದ್ಧಗಂಗೆ ಶ್ರೀಗಳೇ ಪ್ರಮುಖ ಜಗತ್ತು ದೇವರಲೀಲೆ ಎಂದು ಹೇಳುತ್ತಾರೆ. ಅದೇ ರೀತಿ ದಾಸೋಹವು ಸಿದ್ಧಗಂಗೆಯ ಶ್ರೀಗಳ ಲೀಲೆಯಾಗಿದೆ ಎಂದು ಹೇಳಿದವರು ಅಚ್ಚರಿಪಡಬೇಕಾಗಿಲ್ಲ. ದಿನಾಲೂ ಎಂಟೂ ಸಾವಿರಕ್ಕೂ ಮೇಲ್ಪಟ್ಟು ಜನರ ದಾಸೋಹವನ್ನು ನಡೆಸುವುದು ಹುಡುಗಾಟದ ಮಾತಲ್ಲ ಇದು ಅವರ ಆತ್ಮಬಲಕ್ಕೆ ಸಾಕ್ಷಿಯಾಗಿ ನಿಂತಿದೆ.

- ❖ **ಶಿಕ್ಷಣ:** ಇಂದು ಶಿಕ್ಷಣವು ಸೇವೆಯಾಗದೇ ವ್ಯಾಪಾರವಾಗಿದೆ. ಸಿದ್ಧಗಂಗಾ ಶ್ರೀಗಳ ಶಿಕ್ಷಣವನ್ನು ಒಬ್ಬ ಪಾದ್ರಿಯ ಶ್ರದ್ದೆಯಂತೆ ನಡೆಸಿಕೊಂಡಿದ್ದಾರೆ. ಸರ್ಕಾರದ ಅನುದಾನಕ್ಕೆ ಅವರು ಶಿಕ್ಷಣ ಸಂಶ್ಥೆಯನ್ನು ನಡೆಸುತ್ತಿಲ್ಲ. ಒಮ್ಮೆ ಸರ್ಕಾರದ ಅನುದಾನವನ್ನು ಹಿಂದಿರುಗಿಸಿದ್ದುಂಟು, ಒಬ್ಬ ಪವಿತ್ರ ಶಿಕ್ಷಕನಂತೆ ಪ್ರತಿನಿತ್ಯ ಪಾಠ ಹೇಳುತ್ತಾರೆ. ಇದು ಅವರ ಶಿಕ್ಷಣದ ಉಸಿರು.
- ❖ **ಮಕ್ಕಳ ರಾಜ್ಯ:** ಸಣ್ಣ ಮಕ್ಕಳಲ್ಲಿ ಸ್ನೇಹ ಸೌಹಾರ್ದ ಸಾಂಘಿಕ ಶಕ್ತಿ ಮತ್ತು ಸಹನೆಯ ಗುಣಗಳನ್ನು ಬೆಳೆಸುತ್ತಾ ಸಹನೆ ಒಡಮೂಡಬೇಕೆಂಬ ಘನೋದ್ದೇಶದಿಂದ ಮಠವು ವಿವಿದೋಪಕರಣಗಳಿಂದ ಕೂಡಿದೆ.

**5.2 ಉಪಸಂಹಾರ**

ನಿಷ್ಕಾಮ ಕರ್ಮಯೋಗಿ ಅಭಿನವ ಧನ್ವಂತರಿ ನಡೆದಾಡುವ ದೇವರು. ಪರಮ ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ ಒಬ್ಬ ವ್ಯಕ್ತಿಯಲ್ಲಿ ಒಮದು ಮಹಾನ್ ಶಕ್ತಿ ಬಾಳಿನ ಪ್ರತಿಕ್ಷಣವನ್ನು ಸೇವೆಯಾಗಿ ಮಾರ್ಪಡಿಸಿದ ಸಾರ್ಥಕ ಪಡೆದ ಧನ್ಯಜೀವಿ.  ಅವರ ಒಂದು ನೂರು ಮೂರು ವರ್ಷಗಳ ನಡೆದಾಡು ದೇವರು' ಎಂಬುದು ಅವರ ಭಾವ ಸಂಕಲ್ಪ ಶಕ್ತಿಯ ಪ್ರತೀಕ.

'ಯಾರು ಬಂದು ಹೊದರೇನು
ಭುವಿಯ ಮೇಲೆ ಬಿಟ್ಟುದೇನು
ಅವರ –ಇವರ ಗೊಡವೆ ಬೇಡ
ನಾನು–ನೀನು ತೊಡಗುವ

ಎಂಬ ಅವರ ದಿವ್ಯ ವಾಣಿಯಂತೆ ಶಿವಕುಮಾರ್ ಸ್ವಾಮಿಜಿ ಯವರು ಕಟ್ಟಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಸುತ್ತಿಸುತ್ತಿ ನಾ ಬಂದೆ ಇಲ್ಲಿಗೆ
ಬುತ್ತಿ ಗಂಟು ತೀರಿ ಹೋಯ್ತು
ಹೊರಟೆ ನನ್ನ  ಊರಿಗೆ"

ಎಂಬ ಅವರ ವಾಣಿ ಓದಿ ಕಣ್ಣಾಲಿ ತುಂಬಿದವು.

## ಆಧಾರ ಗ್ರಂಥಗಳು


1. ಚ.ನ.ಶಂಕರರಾವ್, ‘ಸಾಮಾಜಿಕ ಸಂಶೋಧನಾ ವಿಧಾನಗಳು’ ಚೇತನ ಬುಕ್ ಹೌಸ್ ದಾವಣಗೆರೆ. 2018.
2. ಪ್ರಥಮ ಮುದ್ರಣ
3. ಅಮೃತ ಗಂಗಾ ಹೆಚ್,ಎಸ್ ಸಿದ್ದಲಿಂಗಪ್ಪ
4. ಶ್ರೀ ಶಿವಕುಮಾರ ಸ್ವಾಮಿಜಿಯವರ ಜೀವನ ಚರಿತ್ರೆ ರಾಜಶೇಖರ ಎನ್
5. ಪ್ರಕಾಶರು ಸಿದ್ದಗಂಗಾ ಪುಸ್ತಕ ಮಳಿಗೆ – ಸಿದ್ದಂಗಾ ಮಠ
6. ವಚನ ಗಂಗಾ ಬಸವಣ್ಣ
7. ಟಿ.ಡಿಜೋಷಿ, ಪ್ರಪಂಚದ ಇತಿಹಾಸ, ಸ್ವಪ್ನ ಬುಕ್‌ಹೌಸ್ ಬೆಂಗಳೂರು.2020.
8. ಅಂತರ್ಜಾಲ ಮಾಹಿತಿ.